ಕಬ್ಬಿನ ಹಾಲನ್ನು ಕುಡಿದ ಪಾತಿಚಿಕ್ಕಿ ಡರ್ರನೆ ತೇಗಿದಳು, ಬೆಳಗ್ಗೆ ತಿಂದಿರಬಹುದಾದ ಬೆಳ್ಳುಳ್ಳಿಯ ಕಂಪಿನೊಂದಿಗೆ ಕಬ್ಬಿನಹಾಲಿನ ಘಮಲೂ ಸೇರಿಕೊಂಡು ವಿಚಿತ್ರ ವಾಸನೆಯಾಗಿ ಎದುರಿಗೇ ಕೂತಿದ್ದ ನನ್ನ ಮೂಗಿಗೆ ಅಡರಿತು. ಒಮ್ಮೆಲೇ ಹೊಟ್ಟೆ ತೊಳೆಸಿದಂತಾದರೂ ಏನೇನೂ ಹೇಳುವಂತಿರಲಿಲ್ಲ ಇವತ್ತು. ಚಿಕ್ಕಿ ಮನಸ್ಸುಬಿಚ್ಚಿ ಎಂದೂ ತೋಡಿಕೊಳ್ಳದ ನೋವನ್ನು ಹೇಳಿಕೊಳ್ಳುತ್ತಿರುವಾಗ ಅವಳ ವಾಸನೆಯ ತೇಗನ್ನು ಸಹಿಸಿಕೊಂಡರೆ ಉತ್ತಮ ಎನ್ನಿಸಿ ಸುಮ್ಮನೆ ಕುಳಿತೆ.



ಪಾತಿಚಿಕ್ಕಿಯ ನೆಮ್ಮದಿಯ ಜೀವನದಡಿಗೆ ನೋವಿನ ಸಮಾಧಿಯಿದೆ ಎಂಬುದು ಅರಿವಾದರೂ ಯಾವತ್ತೂ ಬರದ ವೈರಾಗ್ಯ ಚಿಕ್ಕಿಗೆ ಇಂದು ಅಂಟಿದ್ದೇಕೆ? ಊರವರೊಂದಿಗೇನದರೂ ಮಾತುಕತೆಯಾಯಿತಾ? ಊರೇ ಬೇಡಾ ಎನ್ನುವಷ್ಟರಮಟ್ಟಿಗೆ ಹೋಗಿರಬಹುದಾದ ಗಲಾಟೆಯೇನಿರಬಹುದು ಎಂದು ಮಾದೇವಿಯನ್ನು ಕೇಳೋಣವೆಂದು ಚಿಕ್ಕಿಯ ಮಾತಿಗೆ ಮಾತು ಬೆರೆಸುತ್ತಾ, ಹೂಂಗುಟ್ಟುತ್ತಾ ಪಡಿಮಾಡು, ಹಿತ್ತಲಕಡೆಗೆಲ್ಲಾ ಹೋಗಿ ಕಣ್ಣಾಡಿಸಿದೆ... ಮಾದೇವಿ ಕೆಲಸಕ್ಕೆ ಬರಲಿಲ್ಲವೆನ್ನುವುದು ಖಾತ್ರಿಯಾಯಿತು.

ಪಾತಿಚಿಕ್ಕಿ ಏನು ಮಾಡಬೇಕೆಂದುಕೊಂಡಿದ್ದಾಳೆ, ಅವಳ ತಲೆಯಲ್ಲೇನಿದೆ ಎಂಬುದರ ಸಣ್ಣ ಸುಳಿವೂ ಇಲ್ಲದೆ ಮತ್ತೆ ಚಿಕ್ಕಿಯೆದುರು ಬಂದು ಕುಳಿತೆ.

'ನೋಡು ಕಮಲಿ, ಹಳೆಯದನ್ನೆಲ್ಲಾ ಕೆದಕಿ ನನ್ನನ್ನು ನೋಯಿಸಬೇಕೆಂದೇ ಇಷ್ಟು ವರ್ಷಗಳ ಮೇಲೆ ನಿನ್ನ ಕಾಕಾ ನನ್ನ ದುಡ್ಡನ್ನು ಬಡ್ಡಿ ಸಮೇತ ಹಿಂತಿರುಗಿಸಿದ್ದಾನೆ. ಲೆಕ್ಕದ ಹೊರತಾಗಿ ಒಂದೇ ಒಂದೂ ಯೋಗಕ್ಷೇಮದ ಮಾತಿಲ್ಲ, ಎಲ್ಲಿದ್ದೇನೆಂಬ ವಿಳಾಸವಿಲ್ಲ. ಲಕೋಟೆಯ ಮೇಲೆ ವಾರಾಣಸಿ ಎಂದು ಬರೆದಿರುವ ಚಪ್ಪೆಯೊಂದನ್ನು ಬಿಟ್ಟರೆ ಮತ್ತೇನೂ ಇಲ್ಲ. ಒಮ್ಮೆ ನಿನ್ನ ಕಾಕಾನನ್ನು ಕಾಣಬೇಕು ಕಮಲಿ. ಕಾಣಲೇಬೇಕು.' ಎಂದು ಕಾಕಾ ಕಳಿಸಿದ ಲಕೋಟೆಯನ್ನೂ, ಮನಿ ಆರ್ಡರ್ ಸ್ಲಿಪ್ ನನ್ನ ಕೈಗಿಟ್ಟು, ಕಾಕಾ ಬಿಟ್ಟುಹೋಗಿದ್ದ ಟ್ರಂಕನ್ನು ತನ್ನ ಚೀಲದ ಜೊತೆಯಿರಿಸಿಕೊಂಡು ತನ್ನ ಪ್ರಯಾಣದ ತಯಾರಿಯನ್ನು ತೋರಿಸಿದಳು ಚಿಕ್ಕಿ.

ಜನಸಾಗರ ತುಂಬಿರುವ ವಾರಾಣಸಿಯಲ್ಲಿ ಯಾವತ್ತೋ ನೋಡಿದ್ದ ಕಾಕಾನ ಮರೆತ ಚಹರೆಯನ್ನು ಹೇಗೆ ಹುಡುಕುವುದು! ವಾರಾಣಸಿಯ ಮಣಿಕರ್ಣಿಕಾ ಘಾಟಿನಲ್ಲಿ ಹೆಣಗಳನ್ನು ಸುಡುತ್ತಲೋ ಅಥವಾ ಪಿಂಡವಿಟ್ಟು ಯಾರದ್ದೋ ಶ್ರಾದ್ಧ ಮಾಡಿಸುತ್ತಲೋ ಇದ್ದಿರಬಹುದೇ ಕಾಕ? ಅಥವಾ ಅಘೋರಿಗಳ ನಡುವೆ ಗಡ್ಡ ಬಿಟ್ಟು, ಮೈಗೆಲ್ಲಾ ಭಸ್ಮ ಬಳಿದುಕೊಂಡು ಮರಿಜುವಾನಾ ಸೇವಿಸುತ್ತಿದ್ದಿರಬಹುದೇ? ಸಾಧ್ಯವೇ ಇಲ್ಲ. ಸತ್ತ ಮಂಗನನ್ನೂ ಹುಗಿದು ದೀಪವಿಟ್ಟವ ಅಘೋರಿಗಳ ನಡುವೆ ಬದುಕುವುದಂತೂ ಅಸಾಧ್ಯ. ಮುದಿವಯಸ್ಸಿನ ಸುಕ್ಕುಗಟ್ಟಿದ ಜೋಲುವ ಚರ್ಮದ ಕಾಕಾನನ್ನು ಹುಡುಕಿಕೊಂಡು ಹೊರಡುತ್ತೇನೆನ್ನುವ ಚಿಕ್ಕಿಗೆ ಏನೆನ್ನಲಿ. ದೈವತ್ವಕ್ಕೇರಿಸಿದ ಪರಿಣಾಮವೇ ಇರಬೇಕು ಇದು ಎಂಬ ಶಂಕೆಯೂ ಬಂತು.

ನಾನೇನನ್ನೂ ಮಾತನಾಡಲಿಲ್ಲ. ಮಾತೇ ಹೊರಡಲಿಲ್ಲ.

ಅಲ್ಲಿ ಪವಿತ್ರ ಗಂಗೆಯಿದ್ದಾಳೆ ನಿಜ, ಆದರೆ ಅಲ್ಲಿ ತೇಲುವ ಹೆಣಗಳು, ತೇಲುವ ಹೆಣದ ಮೇಲಿನ